ಬಗ್ಗೆ ಇತ್ಯರ್ಥ ಮಾಡತಕ್ಕಂಥದ್ದು ಆಗುತ್ತದೆ. ಇನ್ನೊಂದು ಪ್ರಕರಣದಲ್ಲಿ ಸತ್ತವರೇ ಅಪಘಾತಕ್ಕೆ ಕಾರಣ ಎನ್ನುವ ಒಂದು ಅಭಿಪ್ರಾಯ ಕೂಡಾ ಇದೆ. ಮತ್ತೊಂದು ವಿಚಾರದಲ್ಲಿ ಪರಿಹಾರವನ್ನು ಎಷ್ಟು ಕೊಡಬೇಕು ಎನ್ನುವುದರ ಬಗ್ಗೆ ಮಾತುಕತೆ ನಡೆಯುತ್ತಿದೆ. ಅದು ಏನೇ ಇರಲಿ, ಸತ್ತಮೇಲೆ ಪರಿಹಾರವನ್ನು ಕೊಡತಕ್ಕಂಥ ಅವಶ್ಯಕತೆ ಇದೆ ಮತ್ತು ಕರ್ತವ್ಯವಿದೆ ಅದಕ್ಕೆ ನಾನು ಕೆ.ಇ.ಬಿ. ಛೇರ್ಮನ್‌ರವರಿಗೆ ತಿಳಿಸುತ್ತೇನೆ. ಆದಷ್ಟು ಶೀಘ್ರವಾಗಿ ಎಲ್ಲಾ ಕೇಸಸ್‌ನಲ್ಲೂ ಕೂಡ ಕೊಡಲೇ ಪರಿಹಾರ ಧನವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೆ, 1987ರಿಂದ 1991ರವರೆಗೆ ಪರಿಹಾರ ಸಿಗದೇ ಇರುವುದು ಬಹಳ ವಿಷಾದನೀಯ ಸಂಗತಿಯೆಂದು ನನಗನಿಸುತ್ತದೆ ಹಾಗೂ ತಮಗೂ ಅನಿಸಬಹುದು. ಒಂದು ತಿಂಗಳೊಳಗೆ ನಮ್ಮ ತಾಲ್ಲೂಕಿನಲ್ಲಿ ಎಷ್ಟು ಜನ ವಿದ್ಯುತ್ ಷಾಕ್‌ನಿಂದ ಡೆತ್ ಆಗಿದ್ದಾರೆ ಅವರಿಗೆ ಪರಿಹಾರ ಒದಗಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : 1987ರಿಂದ 91 ಜನವರಿವರೆಗೆ ಅಂದರೆ ಎಲ್ಲರೂ 1987ಕ್ಕೆ ಸತ್ತರು ಎಂದು ಅಲ್ಲ, ಅಥವಾ 91 ಜನವರಿಯಲ್ಲಿ ಸತ್ತರು ಎಂದು ನಾನು ಹೇಳುತ್ತಿಲ್ಲ. ಅದು ಕೆಲವು ಸಾರಿ ಲೀಗಲ್ ಆಗಿ ನಾವು ಕಾರಣರಲ್ಲ, ನೀವು ಕಾರಣರಲ್ಲ ಇತ್ಯಾದಿಯಾಗಿ ಹೇಳುವುದರಿಂದ ಟೈಮ್‌ನಲ್ಲಿ ವಿಳಂಬವಾಗಿದೆ. ಈ ರೀತಿ ಟೈಮ್‌ನಲ್ಲಿ ವಿಳಂಬವಾಗಬಾರದು. ಅದೇನೇ ಇರಲಿ, ಆ ಪೇಮೆಂಟ್‌ಗೆ ಕೂಡಲೆ ನಾನು ವ್ಯವಸ್ಥೆ ಮಾಡುತ್ತೇನೆ.

ಕರ್ನಾಟಕ ಲೋಕಸೇವಾ ಆಯೋಗದಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ ಹುದ್ದೆಗಳ ಭರ್ತಿ

238 - ಶ್ರೀ ಎಂ. ರೇವಣ್ಣ (ಮಾಗಡಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಲೋಕಸೇವಾ ಆಯೋಗದಿಂದ ಸಹಾಯಕ ಕಾರ್ಯಪಾಲಕ ಅಭಿಯಂತರ (ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್) ಹುದ್ದೆಗಳ ಭರ್ತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಗಳನ್ನು 1984ರಿಂದ ಇದುವರೆಗೂ ನಡೆಸದೆ ಇರಲು ಕಾರಣಗಳೇನು?

ಆ) ಮೇಲಿನ ಹುದ್ದೆಗಳ ಭರ್ತಿಗಾಗಿ ಯಾವಾಗ ಪರೀಕ್ಷೆಗಳನ್ನು ನಡೆಸಲಾಗುವುದು?

ಇ) ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು? ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ರಾಜ್ಯ ಉಚ್ಚ ನ್ಯಾಯಾಲಯವು ಸಹಾಯಕ ಎಕ್ಸಿಕ್ಯುಟಿವ್ ಇಂಜಿನಿಯರ್ಗಳ ನೇರ ನೇಮಕಾತಿ ಆಯ್ಕೆ ಪಟ್ಟಿ ಪ್ರಕಟಿಸಬಾರದೆಂದು ತಡೆಯಾಜ್ಞೆ ನೀಡಿದ್ದರಿಂದ.

ಆ) ಮಿತವ್ಯಯ ಆದೇಶ ಜಾರಿಯಲ್ಲಿರುವುದರಿಂದ, ನೇರ ನೇಮಕಾತಿ ಬಗ್ಗೆ ಇತ್ತೀಚೆಗೆ ಸರ್ಕಾರ ನೀತಿ ನಿರೂಪಣೆ ನಿರ್ಧರಿಸುತ್ತಿದ್ದು ಹೊಸ ನೀತಿ ರೂಪಿಸಿದ ನಂತರ ನೇರ ನೇಮಕಾತಿಗೆ ಕ್ರಮ ವಹಿಸಲಾಗುವುದು.

ಇ) ಒಟ್ಟು 94 ಸಹಾಯಕ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳ ನೇರ ನೇಮಕಾತಿ ಹುದ್ದೆಗಳು ಖಾಲಿ ಇರುತ್ತವೆ. ನೇರ ನೇಮಕಾತಿ ವಿಷಯದಲ್ಲಿ ಹೊಸ ನೀತಿ ರೂಪಿಸಿದ ಮೇಲೆ ಮಿತವ್ಯಯ ಆದೇಶವನ್ನು ಹಿಂತೆಗೆದುಕೊಂಡ ಕೂಡಲೇ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಸಭಾಧ್ಯಕ್ಷರೇ, ನನ್ನ ಮೊದಲನೇ ಪ್ರಶ್ನೆಗೆ ಉತ್ತರದಲ್ಲಿ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿದೆ ಎಂದು ಹೇಳಿದ್ದಾರೆ ಕಳೆದ 1984ರಿಂದ ಯಾವ ವರ್ಷದಲ್ಲಿ ತಡೆಯಾಜ್ಞೆ ಬಂದಿದೆ? ಇಲ್ಲಿಯವರೆಗೆ ತಡೆಯಾಜ್ಞೆಯನ್ನು ತೆರವು ಮಾಡುವುದಕ್ಕೆ ಸರ್ಕಾರಿ ವಕೀಲರು ಅಪಿಯರ್ ಆಗಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ. ಇದೇ ರೀತಿಯಾದರೆ ಯುವ ಜನತೆಗೆ ಬಹಳ ತೊಂದರೆಯಾಗುತ್ತದೆ. ಆದಷ್ಟು ಜಾಗ್ರತೆ ಇಂಜಿನಿಯರುಗಳನ್ನು ನೇಮಕ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, This is WP 1971/85-Stay order was served on the Public Service Commission. Actually that is the order issued by the Karnataka High Court. The selection list was about to be published. ಆ ಹೊತ್ತಿಗೆ ಬಂದಿರತಕ್ಕದ್ದು. ಆಮೇಲೆ ಹೈಕೋರ್ಟ್ನವರು ಏನು ಮಾಡಿದ್ದಾರೆಂದರೆ ಕಂಟಿನ್ಯೂ ಮಾಡಿದ್ದಾರೆ. that case was transferred to KAT. ಕೆ.ಎ.ಟಿ. ಬಂದಮೇಲೆ ಕೂಡ ಹಾಗೇ ಕಂಟಿನ್ಯೂ ಮಾಡಿದ್ದಾರೆ. ಅದಕೋಸ್ಕರ ನಾವು ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅದನ್ನು ವೆಕೇಟ್ ಮಾಡುವುದಕ್ಕೆ ಕೆ.ಎ.ಟಿ. ಮುಂದೆ ಕೂಡ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ : ಈಗ ತಾವು ಸರ್ಕಾರದ ನೀತಿ ಪ್ರಕಾರ ಸಿ ಅಂಡ್ ಡಿ ಗ್ರೂಪಿನ ನೇಮಕಾತಿಗೆ ವಯೋಮಿತಿಯನ್ನು 3 ವರ್ಷ ಜಾಸ್ತಿ ಮಾಡಿದ್ದೀರಿ. ಕಾಂಪಿಟೇಟೀವ್ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಯುವಕರಿಗೆ ಬಹಳ ತೊಂದರೆಯಾಗುತ್ತಿದೆ. ಕೆ.ಪಿ.ಎಸ್.ಸಿ. ಎಗ್ಸಾಮಿನೇಷನ್ ತೆಗೆದುಕೊಳ್ಳುವ ಯುವಕರಿಗೆ ತಾವು ವಯೋಮಿತಿಯನ್ನು ಎಕ್ಸ್ಟೆಂಡ್ ಮಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ : ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಜಂಟೀ ವಲಯದಡಿಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ

221- ಶ್ರೀಯುತರಾದ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ), ಆರ್.ವಿ. ದೇಶಪಾಂಡೆ (ಹಳಿಯಾಳ), ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಜಂಟಿ ವಲಯದಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ನಿರ್ಧರಿಸಿರುವುದು ನಿಜವಲ್ಲವೆ?

ಆ) ಜಂಟಿ ವಲಯದಲ್ಲಿ ಸ್ಥಾಪನೆಯಾಗಲಿರುವ ವಿಜಯನಗರ ಉಕ್ಕು ಕಾರ್ಖಾನೆಗೆ ಬಂಡವಾಳ ಹೂಡಲು ಇದುವರೆವಿಗೂ ಎಷ್ಟು ಖಾಸಗಿ ಉದ್ಯಮೆದಾರರು ಅರ್ಜಿ ಸಲ್ಲಿಸಿದ್ದಾರೆ (ಈ ಉದ್ಯಮೆದಾರರ ಹೆಸರು ಮತ್ತು ವಿವರಗಳನ್ನು ನೀಡುವುದು)

ಇ) ಈ ಅರ್ಜಿ ಸಲ್ಲಿಸಿರುವವರ ಪೈಕಿ ಕರ್ನಾಟಕದ ಉದ್ಯಮೆದಾರರು ಯಾರ್ಯಾರು?

ಈ) ಈ ಅರ್ಜಿಗಳನ್ನು ಪರಿಶೀಲಿಸುವಾಗ ಸರ್ಕಾರವು ಕರ್ನಾಟಕದಲ್ಲಿರುವ ಉದ್ಯಮಿಗಳಿಗೆ ಪ್ರಾಶಸ್ತ್ಯ ನೀಡುತ್ತದೆಯೇ?

ಉ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಹೌದು.

ಆ) ಈ ಕೆಳಕಂಡ 6 ಉದ್ಯಮೆದಾರರು ಅರ್ಜಿಯನ್ನು ಸಲ್ಲಿಸಿದ್ದರು.